# ಕಾರ್ಯಾಚರಣೆ ವ್ಯವಸ್ಥೆ–ವಿಂಡೋಸ್

**ಕಾರ್ಯಾಚರಣೆ ವ್ಯವಸ್ಥೆ ಎಂದರೇನು?**

ಒಂದು ಗಣಕವು ಕಾರ್ಯನಿರ್ವಹಿಸಲು ತಂತ್ರಾಂಶ ಮತ್ತು ಯಂತ್ರಾಂಶಗಳೆರಡೂ ಅಗತ್ಯವೆಂದು ನೀವು ಈಗಾಗಲೇ ತಿಳಿದಿರುವಿರಿ. ಗಣಕದ ಕಾರ್ಯ ನಿರ್ವಹಣೆಗೆ ಬೇಕಾದ ತಂತ್ರಾಶಕ್ಕೆ ವ್ಯವಸ್ಥಾ ತಂತ್ರಾಂಶ (system software) ಎಂದು ಹೆಸರು. ಗಣಕ ಯಂತ್ರಗಳು ಮತ್ತು ಬಳಕೆದಾರನ ನಡುವೆ ಸಂಪರ್ಕ ಏರ್ಪಡಿಸಿ, ಕಾರ್ಯ ನಿರ್ವಹಿಸುವ ಕ್ರಮವಿಧಿಗಳ ಗುಂಪನ್ನು ಕಾರ್ಯಾಚರಣೆ ವ್ಯವಸ್ಥೆ ಎನ್ನುತ್ತಾರೆ. ಕಾರ್ಯಾಚರಣ ವ್ಯವಸ್ಥೆಯ ಗಣಕ ಸ್ಮೃತಿ, ಮುದ್ರಿಕೆ ಚಾಲಕಗಳು, ಮುದ್ರಣ ಮುಂತಾದ ಗಣಕ ಕ್ರಿಯೆಗಳನ್ನು ಮತ್ತು ಎಲ್ಲ ರೀತಿಯ ಬಾಹ್ಯ ಪರಿಕರ (peripheral) ಗಳನ್ನು ನಿಯಂತ್ರಣ ಮಾಡುತ್ತದೆ. ಇದು ಬಳಕೆದಾರ ಮತ್ತು ಗಣಕದ ನಡುವಿನ ಮಧ್ಯವರ್ತಿಯಾಗಿದೆ. ಗಣಕದ ಎಲ್ಲ ಕಾರ್ಯಗಳನ್ನು ಸುಲಭವಾಗಿ ಮತ್ತು ಪರಿಣಾಮಕಾರಿಯಾಗಿ ಬಳುಸವಲ್ಲಿ ಕಾರ್ಯಾಚರಣ ವ್ಯವಸ್ಥೆಯ ಬಳಕೆದಾರ ಸಂಪರ್ಕ ಸಾಧನದಂತೆ (User Interface) ಕಾರ್ಯ ನಿರ್ವಹಿಸುತ್ತದೆ. ಗಣಕ ಪ್ರಪಂಚದಲ್ಲಿ ಅನೇಕ ಕಾರ್ಯಾಚರಣೆ ವ್ಯವಸ್ಥೆಗಳು ಲಭ್ಯವಿದೆ. ಉದಾ : ಡಾಸ್, ವಿಂಡೋಸ್, ಲೈನೆಕ್ಸ್ ಇತ್ಯಾದಿ. ಕಾರ್ಯಾಚರಣ ವ್ಯವಸ್ಥೆಗಳನ್ನು ಎರಡು ರೀತಿ ವಿಂಗಡಿಸಬಹುದು.

**ವಿಂಡೋಸ್ ಪರಿಚಯ**

ಇತ್ತೀಚಿನ ದಿನಗಳಲ್ಲಿ ವಿಂಡೋಸ್ ಬಹಳ ಬಳಕೆಯಲ್ಲಿರುವ ಒಂದು ಕಾರ್ಯಾಚರಣ ವ್ಯವಸ್ಥೆ. ಅಮೆರಿಕದ ಮೈಕ್ರೋಸಾಫ್ಟ್ ಕಾರ್ಪೋರೇಶನ್ ಕಂಪನಿಯವರು ಇದನ್ನು ಅಭಿವೃದ್ಧಿಗೊಳಿಸಿದ್ದಾರೆ. ಇದರಲ್ಲಿ ಯಾವುದೇ ಕ್ರಿಯೆಯನ್ನು ಒಂದು ಕಿಟಕಿಯ ತೆಗೆದು, ಅದರಲ್ಲಿ ದೊರಕುವ ಆಯ್ಕೆಗಳನ್ನು ಬಳಸಿ ಮಾಡುವ ಸೌಲಭ್ಯ ಇರುತ್ತದೆ. ಈ ಕಾರ್ಯಾಚರಣ ವ್ಯವಸ್ಥೆಯಲ್ಲಿ ಮೌಸನ್ನು ವಿಶೇಷವಾಗಿ ಬಳಸಲಾಗುತ್ತದೆ ಮತ್ತು ಬಳಕೆದಾರರು ಸುಲಭವಾಗಿ ಬಳಸುವಂತ ಅನೇಕ ಕ್ರಮವಿಧಿಗಳು ದೊರಯತ್ತವೆ.

**ವಿಂಡೋಸ್ ಬಳಕೆ**

ವಿಂಡೋಸ್ ಕಾರ್ಯಾಚರಣೆ ವ್ಯವಸ್ಥೆಯನ್ನು ಪ್ರಾರಂಭಗೊಳಿಸಿದಾಗ, ಅನೇಕ ಚಿತ್ರಗಳನ್ನು ಹೊಂದಿರುವ ತೆರೆಯು ಕಾಣಬರುತ್ತದೆ. ಈ ತೆರೆಯೇ ಡೆಸ್ಕ್ ಟಾಪ್. ಇದು ಒಂದು ಗಣಕದಿಂದ ಇನ್ನೊಂದು ಗಣಕಕ್ಕೆ ಬದಲಾಗುತ್ತದೆ. ಈ ಕೆಳಗಿನ ಚಿತ್ರದಲ್ಲಿರುವ ಚಿತ್ರಗಳನ್ನು ಗಮನಿಸಿ.



**ಲಾಂಛನಗಳು (Icons)**

ಮೇಲಿನ ಡೆಸ್ಕ್ ಟಾಪ್ ಚಿತ್ರದಲ್ಲಿರುವ ಚಿಕ್ಕ ಚಿತ್ರಗಳೇ ಲಾಂಛನಗಳು. ಇವು ಕಡತ ಕೋಶಗಳು ( File Folders) ದಸ್ತಾವೇಜುಗಳು, ಅನ್ವಯಿಕೆ ಕ್ರಮವಿಧಿಗಳು, ಸಾಧನಗಳು ಮತ್ತು ಇತರ ಅಂಶಗಳನ್ನು

ಸೂಚಿಸುವ ಹೆಸರುಗಳನ್ನು ಹೊಂದಿರುತ್ತವೆ. ಮತ್ತು ಆಯಾ ಅನ್ವಯದ ಆರಂಭಿಕ ಕಿಟಕಿ ತೆರೆದುಕೊಳ್ಳುತ್ತದೆ. ಪ್ರತಿಯೊಂದು ಲಾಂಛನವೂ ಒಂದೊಂದು ಕ್ರಮವಿಧಿಯನ್ನು ಅಥವಾ ತಂತ್ರಾಂಶವನ್ನು ಆರಂಭಿಸಲು ಸಮೀಪ ಮಾರ್ಗ (Short cut) ಆಗಿರುತ್ತದೆ. ಈಗ ಎಲ್ಲ ಗಣಕಗಳಲ್ಲೂ ಸಾಮಾನ್ಯವಾಗಿ ಕಾಣಿಸುವ ಕೆಲವು ಲಾಂಛನಗಳ ಪರಿಚಯ ಮಾಡಿಕೊಳ್ಳೋಣ.

**ನನ್ನ ಗಣಕ (My computer)**

ಇದು ಗಣಕ ತೆರೆಯ ಮೇಲೆ ಕಾಣುವ ಒಂದು ಪ್ರಮುಖ ಲಾಂಛನ. ಇದರ ಮೇಲೆ ಮೌಸನ್ನು ಕ್ಲಿಕ್ಕಿಸಿದಾಗ ಕೆಳಗಿನ ಕಿಟಕಿಯ ತೆರೆದುಕೊಳ್ಳುತ್ತದೆ.



**ಮರುಬಳಕೆ ಬುಟ್ಟಿ (Recycle Bin)**

ಪ್ರತಿಯೊಂದು ಗಣಕ ಪರದೆಯ ಮೇಲೆ ಕಾಣುವ ಮತ್ತೊಂದು ಲಾಂಛನ ಮರುಬಳಕೆ ಬುಟ್ಟಿ, ಯಾವುದೇ ವಿಷಯವನ್ನು ಅಳಿಸಿದಾಗ ಅದು ಮರುಬಳಕೆ ಬುಟ್ಟಿಗೆ ಹೋಗುತ್ತದೆ. ಬೇಕಾದಾಗ ಮರುಬಳಕೆ ಬುಟ್ಟಿಯಲ್ಲಿರುವ ಮಾಹಿತಿಗಳನ್ನು ಹಿಂದಕ್ಕೆ ಪಡೆಯಬಹುದು. ಆದರೆ ಇದರಲ್ಲಿರುವ ಮಾಹಿತಿನ್ನು ಅಳಿಸಿದಾಗ, ಆ ಮಾಹಿತಿಯು ಗಣಕದಿಂದ ಶಾಶ್ವತವಾಗಿ ಅಳಿಸಿಹೋಗುತ್ತದೆ.

**ಮರುಬಳಕೆ ಬುಟ್ಟಿಗೆ ಮಾಹಿತಿಯನ್ನು ಕಳುಹಿಸುವ ವಿಧಾನ**

1. ಅಳಿಸ ಬೇಕಾದ ಕಡತ, ಕಡತಕೋಶ, ಚಿತ್ರ ಅಥವಾ ಅನ್ವಯಿಕದ ಲಾಂಛನದ ಮೇಲೆ ಸೂಚಕವನ್ನಿಟ್ಟು ಒಂದು ಬಾರಿ ಕ್ಲಿಕ್ಕಿಸಿ. ಆ ವಸ್ತು ಆಯ್ಕೆಯಾಗುತ್ತದೆ.
2. "Del" ಗುಂಡಿಯನ್ನು ಒತ್ತಿ. ಅಥವಾ ಮೌಸನ ಬಲಗುಂಡಿಯನ್ನು ಒತ್ತಿ. ತೆರೆದುಕೊಳ್ಳುವ ಬೀಳುಪಟ್ಟಿಯಿಂದಲೂ "Del" ಆಯ್ಕೆಯನ್ನು ಆಯ್ದುಕೊಳ್ಳಬಹುದು.
3. ಆಯ್ಕೆ ಮಾಡಿದ ವಸ್ತುವನ್ನು ನಿಶ್ಚಿತವಾಗಿಯೂ ಮರುಬಳಕೆ ಬುಟ್ಟಿಗೆ ರವಾನಿಸಬೇಕೆ? ಎಂದು ಖಚಿತಪಡಿಸಿಕೊಳ್ಳುವ ಸಂವಾದ ಚೌಕ ತೆರೆದುಕೊಳ್ಳುತ್ತದೆ.
4. ನಿಮ್ಮ ಉತ್ತರ "Yes" ಆದರೆ ಆಯ್ಕೆಗೊಂಡಿದ್ದ ವಸ್ತು ಮರುಬಳಕೆ ಬುಟ್ಟಿಗೆ ರವಾನೆಯಾಗುತ್ತದೆ.

**ಮರುಬಳಕೆ ಬುಟ್ಟಿಯಿಂದ ಮಾಹಿತಿಯನ್ನು ಹಿಂಪಡೆಯುವ ವಿಧಾನ**

1. ಮರುಬಳಕೆ ಬುಟ್ಟಿಯನ್ನು ತೆಗೆಯಿರಿ.
2. ಕಡತ ಅಥವಾ ಕಡತಕೋಶವನ್ನು ಆಯ್ಕೆಮಾಡಿ.
3. ಮೌಸನ ಬಲಗುಂಡಿಯನ್ನು ಕ್ಲಿಕ್ಕಿಸಿ.

4. ಆಗ ಕಾಣುವ ಬೀಳುಪಟ್ಟಿಯಿಂದ ಹಿಂಪಡೆ (Restore) ಆಯ್ಕೆಯನ್ನು ಆಯ್ಕೆಮಾಡಿ.

## ವಿಂಡೋಸ್ ಕಾರ್ಯಾಚರಣೆ ಬಳಕೆ

### ಕಾರ್ಯಪಟ್ಟಿಕೆ (Task Bar)

ವಿಂಡೋಸ್‌ನ ಗಣಕತೆರೆ ಅಂದರೆ ಡೆಸ್ಕ್ ಟಾಪನ್ನು ಗಮನಿಸಿ. ಅಲ್ಲಿ ಕೆಳ ಎಡ ತುದಿಯಲ್ಲಿ "ಆರಂಭ ಗುಂಡಿ" ಮತ್ತು ಬಲ ತುದಿಯಲ್ಲಿ "ಸಮಯ ಸೂಚಿ" ಕಾಣಿಸುತ್ತದೆ. ಇವೆರಡೂ ಇರುವ ಒಂದು ಪಟ್ಟಿಕೆ ಇದೆಯಲ್ಲವೇ? ಇದನ್ನು ಕಾರ್ಯಪಟ್ಟಿಕೆ (Task Bar)ಎನ್ನುತ್ತಾರೆ.

### ಶೀರ್ಷಿಕೆ ಪಟ್ಟಿಕೆ

ಯಾವುದೇ ಅನ್ವಯಿಕವನ್ನು ತೆರೆದಾಗ, ಅದರ ಕಿಟಕಿಯ ಮೇಲ್ಭಾಗದಲ್ಲಿ ಒಂದು ಪಟ್ಟಿಕೆ ಕಾಣಿಸುತ್ತದೆ. ಅದರ ಎಡ ತುದಿಯಲ್ಲಿ ನೀವು ಬಳಸುತ್ತಿರುವ ಕಡತದ ಹೆಸರು ಮತ್ತು ಅನ್ವಯಿಕದ ಹೆಸರು ಕಾಣಿಸುತ್ತದೆ. ಬಲ ತುದಿಯಲ್ಲಿ ಮೂರು ಗುಂಡಿಗಳು ಕಾಣಿಸುತ್ತದೆ.

### ಕಿರಿದುಗೊಳಿಸು(Minimize) ಗುಂಡಿ

ಕಿರಿದುಗೊಳಿಸು ಗುಂಡಿಯು ಅನ್ವಯದ ಕಿಟಿಕಿಯನ್ನು ಕಾರ್ಯಪಟ್ಟಿಕೆಯ ಮೇಲಿನ ಒಂದು ಗುಂಡಿಯನ್ನಾಗಿ ಪರಿವರ್ತಿಸುತ್ತದೆ.

### ಹಿರಿದುಗೊಳಿಸು(Maximize) ಗುಂಡಿ

ಹಿರಿದುಗೊಳಿಸು ಗುಂಡಿಯು ಕಿಟಕಿಯ ಪೂರ್ಣ ಪರದೆಯನ್ನು ಅವರಿಸುವಂತೆ ಮಾಡುತ್ತದೆ.

### ಮುಚ್ಚು (Close)

ಮುಚ್ಚು ಗುಂಡಿಯ ಅನ್ವಯಿಕದ ಕಿಟಕಿಯನ್ನು ಮುಚ್ಚುತ್ತದೆ ಮತ್ತು ಕಾರ್ಯಪಟ್ಟಿಕೆಯಿಂದ ಅನ್ವಯಿಕದ ಗುಂಡಿಯನ್ನು ತಗೆದುಹಾಕುತ್ತದೆ.

## ಪರಿವಿಡಿ ಪಟ್ಟಿಕೆ(Sub Menu)

ಪರಿವಿಡಿ ಪಟ್ಟಿಕೆಯಲ್ಲಿ ಒಂದು ಪರಿವಿಡಿಯನ್ನು ಆಯ್ಕೆಮಾಡುವಾಗ ಅದಕ್ಕೆ ಸಂಬಂದಿಸಿದ ಉಪಪರಿವಿಡಿಗಳು ಬೀಳುಪಟ್ಟಿಯ ರೂಪದಲ್ಲಿ ಕಾಣತ್ತದೆ. ಕೆಳಗಿನ ಚಿತ್ರದಲ್ಲಿ ಕಡತ ಪರಿವಿಡಿಯಯ ಉಪಪರಿವಿಡಿಗಳನ್ನು ತೋರಿಸಲಾಗಿದೆ.

### ಉಪಕರಣ ಪಟ್ಟಿಕೆ (Tools)

ಪರಿವಿಡಿ ಪಟ್ಟಿಕೆಯ ಕೆಳಗೆ ನಿರ್ದಿಷ್ಟ ಕಾರ್ಯಗಳಿಗೆ ಮೀಸಲಾದ ಪ್ರತ್ಯೇಕ ಗುಂಡಿಗಳನ್ನು ಹೊಂದಿರುವ ಉಪಕರಣ ಪಟ್ಟಿಕೆ ಇರುತ್ತದೆ. ಈ ಪಟ್ಟಿಕೆಯಲ್ಲಿ ಸಾಮನ್ಯವಾಗಿರುವ ಗುಂಡಿಗಳು ಹೊಸ. ತೆಗೆ, ಉಳಿಸು, ಇ–ಅಂಚೆ, ಮುದ್ರಿಸು, ಮುದ್ರಣ ಮುನ್ನೋಟ, ಕತ್ತರಿಸು ನಕಲಿಸು ಅಂಟಿಸು ಇತ್ಯಾದಿ.

### ಕಿಟಕಿಗಳ ನಡುವೆ ಬದಲಾವಣೆ

ವಿಂಡೋಸ್ ಕಾರ್ಯಾಚರಣೆ ವ್ಯವಸ್ಥೆಯು ಏಕಕಾಲದಲ್ಲಿ ಒಂದಂಕ್ಕಿಂತ ಹೆಚ್ಚಿನ ಕಿಟಕಿಗಳನ್ನು ತರೆಯಲು ಅವಕಾಶ ಮಾಡಿಕೊಡುತ್ತದೆ.

**ಗಣಕ ತೆರೆ ಚಿತ್ರ ಬದಲಿಕೆ**

ಬೇರೆ, ಬೇರೆ ಗಣಕ ತೆರೆಗಳು ಬೇರೆ ಬೇರೆ ಚಿತ್ರಗಳನ್ನು ಹೊಂದಿರುವುದನ್ನು ನೀವು ಗಮನಿಸಿದ್ದೀರಾ? ಇದು ಹೇಗೆ ಸಾಧ್ಯ?

1. ಗಣಕ ಪರದೆಯ ಮೇಲೆ ಮೌಸನ ಬಲಗುಂಡಿಯನ್ನು ಕ್ಲಿಕ್ಕಿಸಿ.
2. Properties ಆಯ್ಕೆಯನ್ನು ಕ್ಲಿಕ್ಕಿಸಿ, ಕೆಳಗಿನ Display Properties ಕಿಟಕಿಯು ಮೂಡುತ್ತದೆ.
3. Background ಆಯ್ಕೆಯ ಮೇಲೆ ಕ್ಲಕ್ಕಿಸಿ.
4. ಕಾಣುವ ಪಟ್ಟಿಯಿಂದ ಬೇಕಾದ ಚಿತ್ರವನ್ನು ಆಯ್ಕೆಮಾಡಿ, apply ಗುಂಡಿಯನ್ನು ಕ್ಲಿಕ್ಕಿಸಿ..

**ಪರದೆ ರಕ್ಷಕ (Screen Saver)**

ಗಣಕದ ಪರದೆಯ ಮೇಲೆ ಚಿತ್ರಗಳು ಸರಿದಾಡಲು ಮಾಡುವ ಈ ಆಯ್ಕೆಯು ಕೇವಲ ಮನೋರಂಜನೆಗೆ ಮಾತ್ರವಲ್ಲ. ಪರದೆಯ ಒಂದೇ ಕಡೆ ಚಿತ್ರವಿದ್ದಾಗ ಆ ಭಾಗಗಳು ಹಾನಿಗೊಳಗಾಗುತ್ತವೆ. ಚಿತ್ರಗಳು ಸರಿದಾಡಿದಾಗ, ಹಾನಿಯಾದಗ ಪರದೆಗೆ ರಕ್ಷಣೆ ದೊರಕುತ್ತದೆ. ಗಣಕವನ್ನು ಕೆಲವು ಸಮಯ ಬಳಸದಿದ್ದರೆ ಈ ಚಿತ್ರಗಳು ಮೂಡುತ್ತವೆ. ಮೌಸನ್ನು ಮತ್ತೆ ಮುಟ್ಟುವವರೆಗೆ ಚಿತ್ರವು ಪರದೆಯ ಮೇಲೆ ಓಡಾಡುತ್ತಿರುತ್ತದೆ. ಈ ಆಯ್ಕೆಗಾಗಿ

1. Screen Saver ಆಯ್ಕೆಯ ಮೇಲೆ ಕ್ಲಕ್ಕಿಸಿ.
2. ಕೆಳಗಿನ ಕಿಟಕಿ ಮೂಡುತ್ತದೆ.
3. Settings ಆಯ್ಕೆಯ ಮೇಲೆ ಕ್ಲಕ್ಕಿಸಿ.
4. ಆ ಕಿಟಕಿಯ Screen Saver ಆಯ್ಕೆಯಲ್ಲಿ ಕಾಣುವ ಪಟ್ಟಿಯಿಂದ ಚಿತ್ರವನ್ನು ಆಯ್ಕೆಮಾಡಿ.
5. Apply ಗುಂಡಿಯನ್ನು ಕ್ಲಕ್ಕಿಸಿ.
6. ಆಯ್ಕೆಯನ್ನು ನೋಡಲು ಮುನ್ನೋಟ (Prview) ಗುಂಡಿಯನ್ನು ಕ್ಲಿಕ್ಕಿಸಿ.

**ದಸ್ತಾವೇಜುಗಳು (Documents)**

ದಸ್ತಾವೇಜುಗಳು ಪರಿವಿಡಿಯನ್ನು ಕ್ಲಿಕ್ಕಿಸಿದಾಗ ಇತ್ತೀಚಿಗೆ ತಗೆದು ಬದಲಿಸಿದ ಅಥವಾ ಬಳಸಿದ 15 ದಸ್ತಾವೇಜುಗಳ ಪಟ್ಟಿ ಮೂಡುತ್ತದೆ. ಇದನ್ನು ಬಳಸಿ ಅವುಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿ ಬಳಸಬಹುದು.

**ಹುಡುಕು (Find)**

ನಿಮ್ಮ ಗಣಕ ಅಥವಾ ಗಣಕ ಜಾಲದಲ್ಲಿನ ಕಡತ, ಕಡತಕೋಶ ಅಥವಾ ಗಣಕವನ್ನು ಹುಡುಕಲು "ಹುಡುಕು" ಆಯ್ಕೆಯನ್ನು ಬಳಸಬಹುದು.

**ಸಹಾಯ (Help)**

ಆರಂಭ ಪರಿವಿಡಿಯ ಆಯ್ಕೆಯ ಕ್ರಮವಿಧಿ ಅಥವಾ ಅದೇಶಕ್ಕೆ ಸಂಬಂದಿಸಿದಂತೆ ಸಹಾಯವನ್ನು ನೀಡುತ್ತದೆ. ಈ ಆಯ್ಕೆಯನ್ನು ಕ್ಲಿಕ್ಕಿಸಿದಾಗ ಒಂದು ಕಿಟಕಿಯ ತೆರೆದುಕೊಳ್ಳುತ್ತದೆ.

**ಗಣಕ ಕಾರ್ಯಸ್ಥಗಿತ (Shut Down)**

ಗಣಕದ ವಿದ್ಯುತ್ ಸರಬರಾಜನ್ನು ಇದ್ದಕ್ಕಿದ್ದಂತೆ ನಿಲ್ಲಿಸಬಾರದು. ಬಳಸುತ್ತಿರುವ ಎಲ್ಲ ಕಡತಗಳನ್ನು ಮತ್ತು ಅನ್ವಯಿಕ ಕಿಟಕಿಗಳನ್ನು ಮಚ್ಚಬೇಕು. ಅನಂತರ ಸ್ಥಗಿತಗೊಳಿಸಬೇಕು. ಆರಂಭ ಪರಿವಿಡಿಯಲ್ಲಿನ ಆಯ್ಕೆಯ ಮೇಲೆ ಕ್ಲಿಕ್ಕಿಸಿದಾಗ ಕೆಳಗಿನ ಕಿಟಕಿ ಮೂಡುತ್ತದೆ. ಇದರಲ್ಲಿ ಗುಂಡಿಯನ್ನು ಒತ್ತಿದಾಗ ಗಣಕ ಕಾರ್ಯಸ್ಥಗಿತಗೊಳ್ಳುತ್ತದೆ.

**ಹಣವು ಮನುಷ್ಯನ ಚಲಾವಣೆಗಾಗಿದೆಯೇ ಹೊರೆತು ಹಣಕ್ಕಾಗಿ ಮನುಷ್ಯನಲ್ಲ:– ಈಸೋಪ**